# ಸಾವನ್ನು ಕುರಿತು ಒಂದಿಷ್ಟು..

ಹುಟ್ಟು ಮತ್ತು ಸಾವು –ಈ ಎರಡೂ ಜೀವಿಗಳ ಪಾಲಿಗೆ ಅನಿವಾರ್ಯವಾಗಿರುವ ನೈಸರ್ಗಿಕ ಪ್ರಕ್ರಿಯೆಗಳು. ಹುಟ್ಟಿನೊಂದಿಗೆ ಪ್ರಾರಂಭವಾಗುವ ಆಯುಷ್ಯದ ಗಡಿಯಾರದ ಟಿಕ್ ಟಿಕ್ ಸದ್ದು ಸಾವಿನೊಂದಿಗೆ ಸ್ತಬ್ಧವಾಗುತ್ತದೆ. ಇದು ಎಲ್ಲರಿಗೂ ತಿಳಿದಿರುವ ಸಾರ್ವಕಾಲಿಕ ಸತ್ಯ. ಆದರೆ ನೂರಕ್ಕೆ ತೊಂಬತ್ತೊಂಬತ್ತು ಮಂದಿ ಈ ಸತ್ಯವನ್ನು ವಿಸ್ಮೃತಿಯ ಅಳದಲ್ಲಿ ಅದುಮಿಡಲು ಪ್ರಯತ್ನಿಸುತ್ತಾರೆ. ಬದುಕೆಂಬುದು ಎಷ್ಟೇ ಅಸಹನೀಯವಾಗಿದ್ದರೂ ಬಹುಮಂದಿಗೆ ಸಾವು ಪ್ರಿಯವೆನ್ನಿಸುವುದಿಲ್ಲ. ಸಾವಿನ ಕುರಿತಾದ ಭಯ ಹಾಗೂ ಜೀವನದ ಬಗೆಗಿನ ಆಕರ್ಷಣೆ– ಇವೆರಡೂ ನಮ್ಮನ್ನು ಸಾವಿನಿಂದ ದೂರವಿರಲು ಪ್ರೇರಿಸುತ್ತವೆ ಎನ್ನಬಹುದು.

ದಾದಾ ವಾಸ್ವಾನಿಯವರು ದಾಖಲಿಸಿರುವ ಒಂದು ಸತ್ಯಘಟನೆ ಹೀಗಿದೆ:

ಒಬ್ಬ ಹಣ್ಣು ಹಣ್ಣು ಮುದುಕಿ ಇದ್ದಳು. ಅವಳಿಗೆ ವಯಸ್ಸಿನ ತೊಂದರೆಯಲ್ಲದೆ ಅಸಹನೀಯವಾದ ಯಾವುದೋ ಕಾಹಿಲೆಯೂ ಇತ್ತು. ಮುದುಕಿಗೆ ಬದುಕು ಭಾರವಾಗಿತ್ತು. ವಾಸ್ವಾನಿಯವರ ಹತ್ತಿರ ಬಂದು 'ನನಗೆ ಬದುಕು ಸಾಕೆನ್ನಿಸಿದೆ; ಸಾವನ್ನು ಎದುರು ನೋಡುತ್ತಿದ್ದೇನೆ' ಎಂಬರ್ಥದ ಮಾತನ್ನಾಡಿದಳು. ಆಕೆಯನ್ನು ಪರೀಕ್ಷಿಸುವ ಸಲುವಾಗಿ ವಾಸ್ವಾನಿಯವರು ಒಂದು ಚೂರ್ಣವನ್ನು ತೋರಿಸಿ, 'ಈ ಚೂರ್ಣವನ್ನು ಸೇವಿಸಿದರೆ ನೀನು ಕೆಲವೇ ಗಂಟೆಗಳಲ್ಲಿ ನಿನ್ನೆಲ್ಲ ನೋವುಗಳಿಂದ ಬಿಡುಗಡೆ ಪಡೆಯುವೆ' ಎಂದರು. ಆದರೆ ಆ ಮುದುಕಿ ತಟಕ್ಕನೆ– 'ಈಗ ಬೇಡ. ನಾನು ಮಾಡಬೇಕಾಗಿರುವ ಕೆಲವು ಕೆಲಸಗಳಿವೆ. ಅವನ್ನು ಪೂರೈಸಿ ಬಂದು ಈ ಚೂರ್ಣವನ್ನು ಪಡೆಯುತ್ತೇನೆ' ಎಂದಳು. ಮತ್ತೆ ಆಕೆ ವಾಸ್ವಾನಿಯವರನ್ನು ಭೇಟಿ ಮಾಡಲೇ ಇಲ್ಲ. ಸಾವು ಬಹಳಷ್ಟು ಜನರ ಪಾಲಿಗೆ– ಎಂಥ ದಾರುಣ ಪರಿಸ್ಥಿತಿಯಲ್ಲೂ– ಸ್ವೀಕಾರಾರ್ಹ ಆಗುವುದಿಲ್ಲವೆಂಬುದಕ್ಕೆ ಇದೊಂದು ಉದಾಹರಣೆ.

ಎಲ್ಲರ ಬದುಕಿನಲ್ಲೂ ಬಯಸದೇ ಬರುವ ಅನುಭವವೆಂದರೆ ಸಾವಿನ ಅನುಭವ. ಆದ್ದರಿಂದಲೇ ಮೃತ್ಯುವೆಂಬುದೊಂದು 'ಆಹ್ವಾನವಿಲ್ಲದ ಅತಿಥಿ.' ನಾವು ಕರೆಯದಿದ್ದರೂ ಅದು ಬರಬೇಕಾದ ಮುಹೂರ್ತದಲ್ಲಿ ಪ್ರತ್ಯಕ್ಷವಾಗುತ್ತದೆ. ಆದರೆ ಅದನ್ನು ಅಕಾಲದಲ್ಲಿ ಪ್ರಜ್ಞಾಪೂರ್ವಕವಾಗಿ ಆಹ್ವಾನಿಸುವುದು ಮಾತ್ರ ಬದುಕಿಗೆ ನಾವು ಮಾಡುವ ಬಹುದೊಡ್ಡ ಅನ್ಯಾಯ. ಅದು ಬಂದಾಗ ಮುಕ್ತ ಮನಸ್ಸಿನಿಂದ ಸ್ವಾಗತಿಸಿ ಬರಮಾಡಿಕೊಳ್ಳುವುದು ಪಕ್ವತೆಯ ಲಕ್ಷಣ. ಸಾವು ತಾನಾಗಿ ಬರುವವರೆಗೆ ಈ ದೇಹ ಹಾಗೂ ಮನಸ್ಸುಗಳನ್ನು ಸಾಧ್ಯವಾದಷ್ಟು ಸುಸ್ಥಿತಿಯಲ್ಲಿರಿಸಿಕೊಳ್ಳಬೇಕಾದುದು ಮನುಷ್ಯನ ಕರ್ತವ್ಯ. ಹಾಗೆ ನೋಡಿದರೆ ಮೃತ್ಯು ಪ್ರಜ್ಞೆಯಿಂದಾಗಿ ಮನುಷ್ಯನಲ್ಲಿನ ಕರ್ತವ್ಯ ಪ್ರಜ್ಞೆ ಜಾಗೃತವಾಗಬೇಕು. ತಾನು ಮಾಡಬೇಕಾಗಿದ್ದ ಕೆಲಸಗಳನ್ನು ಪೂರೈಸಿರುವ 'ಕೃತ ಕೃತ್ಯತಾಭಾವ'ವೇ ಸಾವಿನ ಗಳಿಗೆಯಲ್ಲಿ ಮನುಷ್ಯನಿಗೆ ಸಮಾಧಾನ ಕೊಡುವ ಅಂಶ. ಬದುಕಿನ ಎಲ್ಲ ಏರಿಳಿತಗಳೂ ಸಾವಿನಲ್ಲಿ ಲಯವಾಗುತ್ತವೆ ಎಂಬ ನಿರೀಕ್ಷೆಯಿಂದಾಗಿಯೇ Death is a liberator ಎಂಬ ನಂಬಿಕೆ ಹುಟ್ಟಿಕೊಂಡಿದೆ.

ಈ ದೇಹವೆಂಬುದು ಕಾಲದ ನಿಯಂತ್ರಣಕ್ಕೆ ಒಳಗಾಗಿರುವಂಥದು. ಹುಟ್ಟಿನ ಸಮಯದಲ್ಲಿ ಉಸಿರಾಟದ ಮೂಲಕ ದೇಹ ಯಂತ್ರಕ್ಕೆ ಚಾಲನೆ ಕೊಟ್ಟು ಪ್ರಾಣವಾಯು ಸಾವಿನ ಗಳಿಗೆಯಲ್ಲಿ ದೇಹದಿಂದ ನಿರ್ಗಮಿಸಿ, ವಿಶ್ವಶಕ್ತಿಯಲ್ಲಿ ಲೀನಗೊಳ್ಳುತ್ತದೆ. ಪಂಚಭೂತಗಳಿಂದ ರಚಿತವಾಗಿರುವ ಈ ಶರೀರ ವಿಘಟನೆ ಹೊಂದಿ ಮತ್ತೆ ಮೂಲ ರೂಪಗಳಿಗೆ ಹಿಂತಿರುಗುತ್ತದೆ. ಆದ್ದರಿಂದಲೇ ಭಾರತೀಯ ವೇದಾಂತ 'ವಿನಾಶ'ವೆಂದರೆ 'ಶೂನ್ಯ'ವೆಂದು ಭಾವಿಸುವುದಿಲ್ಲ. ಅದರ ಪ್ರಕಾರ ಸಾವು ಎಂದರೆ 'ರೂಪಾಂತರ'ವೆಂದಷ್ಟೇ. ಮಾಗಿದ ಹಣ್ಣು ತೊಟ್ಟಿನಿಂದ ಕಳಚಿಕೊಂಡು ಕೆಳಕ್ಕೆ ಬೀಳುವಂತೆ, ಪೂರ್ಣಾಯುಷ್ಯವನ್ನು ಅನುಭವಿಸಿದ ವ್ಯಕ್ತಿಯನ್ನು ಮೃತ್ಯು ಈ ಜಗತ್ತಿನಿಂದ ಸೆಳೆದೊಯ್ಯುತ್ತದೆ. ಈಶೋಪನಿಷತ್ತಿನ ಒಂದು ಮಂತ್ರ ಭಾರತೀಯ ಮನಸ್ಸು ಮೃತ್ಯುವನ್ನು ಸ್ವೀಕರಿಸುವ ರೀತಿಯನ್ನು ಹೀಗೆ ಸೂಚಿಸುತ್ತದೆ:

ವಾಯುರನಿಲ ಮಮೃತಂ ಅಥೇದಂ ಭಸ್ಮಾಂತಂ ಶರೀರಂ:
ಓಂ ಕ್ರತೋಸ್ಮರ; ಕೃತಂ ಸ್ಮರ; ಕ್ರತೋಸ್ಮರಃ ಕೃತಂಸ್ಮರ।

(ಶರೀರವು ಬೂದಿಯಾಗಿ, ಪ್ರಾಣ ತನ್ನ ಮೂಲ ರೂಪಕ್ಕೆ ಹಿಂತಿರುಗಲಿ. ಮನಸ್ಸೆಂಬುದು ತನ್ನ ಬದುಕಿನ ಒಳ್ಳೆಯ ಕರ್ಮಗಳನ್ನು ನೆನೆಯುತ್ತಿರಲಿ.)

**-ವೈನತೇಯ**

## ಮಾತೇ ಮುತ್ತು

★ ಸುಖ ಸಾಧನಗಳಾದ ಪ್ರಿಯ ವಿಷಯಗಳು ಈ ಮೂರು ಲೋಕದಲ್ಲಿ ಎಷ್ಟಿವೆಯೋ ಅವೆಲ್ಲ ಸೇರಿದರೂ, ಇಂದ್ರಿಯಗಳ ಸೆಳೆತಕ್ಕೆ ಒಳಗಾದವನನ್ನು ತೃಪ್ತಿಪಡಿಸಲಾರವು.

-ಭಾಗವತ

★ ಫಲ ಮಾನವನ ಕರ್ಮಾಧೀನ. ಬುದ್ಧಿ ಕರ್ಮಾನುಸಾರ ಮುನ್ನಡೆಯುತ್ತದೆ. ಆದ್ದರಿಂದ ವಿದ್ವಾಂಸರು ಮತ್ತು ಮಹಾತ್ಮರು ಯೋಚಿಸಿ ಸರಿಯಾದ ಕರ್ಮವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ.

-ಚಾಣಕ್ಯ

★ ಕೋಪಗೊಂಡವನಿಗೆ, 'ಇದು ಹೇಳತಕ್ಕದ್ದು, ಇದು ಹೇಳಬಾರದ್ದು' ಎಂಬ ಅರಿವೇ ಇರುವುದಿಲ್ಲ. ಅವನು ಮಾಡದಿರುವ ಕೆಲಸವಿಲ್ಲ, ಆಡದಿರುವ ಮಾತಿಲ್ಲ.

-ರಾಮಾಯಣ

★ ಜಲದಲ್ಲಿ ಅಲೆಗಳಿದ್ದರೆ ಮನುಷ್ಯ ತನ್ನ ಪ್ರತಿಬಿಂಬವನ್ನು ಅದರಲ್ಲಿ ಕಾಣಲಾರ. ಅಂತೆಯೇ ಸೋಮಾರಿಯ ಮನಸ್ಸು ಅವನ ಹಿತವನ್ನು ಹಾಳುಮಾಡುತ್ತದೆ. ಅವನು ಬೇರೆಯವರಿಗೆ ಒಳಿತು ಮಾಡಲು ಹೇಗೆ ಸಾಧ್ಯ?

-ಭಗವಾನ್ ಬುದ್ಧ

★ ಗಾಳಿಯನ್ನು ಸುತ್ತಿ ಬಂಧಿಸಬಹುದು, ಆಕಾಶವನ್ನಾದರೂ ಕತ್ತರಿಸಬಹುದು, ಅಲೆಗಳನ್ನೂ ಪೋಣಿಸಬಹುದು. ಆದರೆ ಆಯಸ್ಸಿನ ಬಗ್ಗೆ ನಂಬಿಕೆ ಇಡುವುದಕ್ಕಾಗುವುದಿಲ್ಲ.

-ಗರುಡ ಪುರಾಣ

★ ಸಕಲ ಶಾಸ್ತ್ರಗಳನ್ನೂ ವಿದ್ವಾಂಸರು ರಚಿಸಿರುವುದು ಮನಃಶಾಂತಿ ಲಭಿಸಲೆಂದು. ಯಾರ ಮನಸ್ಸು ಶಾಂತವಾಗಿದೆಯೋ ಅವನೇ ಸರ್ವಶಾಸ್ತ್ರಜ್ಞ.

-ಮಹಾಭಾರತ

★ ಮಲಗಿರುವ ಸಿಂಹದ ಬಾಯಿಗೆ ಜಿಂಕೆ ಹೋಗಿ ಬೀಳುವುದಿಲ್ಲ.

-ಪಂಚತಂತ್ರ

★ ಸಂತರು ಸ್ವಯಂ ಪರರ ಹಿತಕ್ಕಾಗಿ ಕೆಲಸ ಮಾಡುತ್ತಾರೆ.

-ಭರ್ತೃಹರಿ

★ ಜನತೆ ಕಲ್ಪವೃಕ್ಷವಿದ್ದಂತೆ. ನೀವು ಯಾವ ಭಾವನೆಯಿಂದ ಅವರ ಬಳಿ ಹೋಗುತ್ತೀರೋ ಅದನ್ನೇ ನೀವು ಪಡೆಯುತ್ತೀರಿ.

-ವಿನೋಬಾ ಭಾವೆ

★ ಗೂಟ ನಾಮವ ಹೊಡೆದು, ಗುಂಡು ತಂಬಿಗೆ ಹಿಡಿದು, ಕೋಟಂಚು ಧೋತರ ಮಡಿಯನ್ನುಂಟು, ದಾಟು ಕಾಲಿಡುತ ನಡೆಯುವುದು ಢೋಂಗೀತನ.

-ಪುರಂದರದಾಸ

★ ತಾಯಿ, ತಂದೆ ಮತ್ತು ಗುರು –ಇವರೇ ಪ್ರತ್ಯಕ್ಷ ದೇವರು. ಇವರನ್ನು ಅವಹೇಳನ ಮಾಡುವುದು ಅಪ್ರತ್ಯಕ್ಷವಾಗಿ ದೇವಗಣವನ್ನು ನಿಂದಿಸಿದಂತೆ.

-ವಾಲ್ಮೀಕಿ

★ ಕಿರುಚಾಟ, ಬೊಬ್ಬೆಗಳಿಂದ ಶಕ್ತಿ ವ್ಯಯ ಮಾತ್ರವಲ್ಲ, ಮಾನವೂ ವ್ಯಯವಾಗುತ್ತದೆ. ತಾಳ್ಮೆಯಿಂದ ಚಿಂತನೆಗಳ ಕಡೆಗೆ ಮನಸ್ಸನ್ನು ಹರಿಸಿದರೆ ದುಪ್ಪಟ್ಟು ಸಂತೋಷ ಸಿಕ್ಕುತ್ತದೆ.

-ವಿ.ಕೃ.ಗೋಕಾಕ

★ ಈರ್ಷೆಯುಳ್ಳ ಮನುಷ್ಯನಿಗೆ ಸ್ವತಃ ಮಹಾತ್ವಾಕಾಂಕ್ಷೆ ಎಂಬುದು ಇರುವುದಿಲ್ಲ. ತನ್ನ ದಾರಿಯನ್ನು ಅಪವಿತ್ರಗೊಳಿಸುವ ಅಭಿಲಾಷೆ ಅವನದ್ದಾಗಿರುತ್ತದೆ. ಆದ್ದರಿಂದ ಈರ್ಷೆ ಮಹಾಪಾಪ.

-ತಿರುವಳ್ಳುವರ್